**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೆರಡನೆಯ ಅಧಿವೇಶನ**

# ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–21)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 10ಎ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) 10ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿನ “ಅಥವಾ ಯಾವುದೇ ಅನುಸೂಚಿತ ಬ್ಯಾಂಕಿನ ಹೆಸರಿನಲ್ಲಿ ಪಡೆಯಲಾದ ಡಿಮ್ಯಾಂಡ್‌ಡ್ರಾಫ್ಟ್ ಅಥವಾ ಪೇ ಆರ್ಡರ್ ಮೂಲಕ” ಎಂಬ ಪದಗಳನ್ನು ಹಾಗೂ “ಅಥವಾ ಸಂದರ್ಭಾನುಸಾರ ಡಿಮ್ಯಾಂಡ್ ಡ್ರಾಫ್ಟ್‌ನ್ನು ಅಥವಾ ಪೇ ಆರ್ಡರನ್ನು ಸಲ್ಲಿಸಿದ ತರುವಾಯ” ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

2023-24ರ ಜುಲೈ ಆಯವ್ಯಯ ಭಾಷಣದ ಖಂಡಿಕೆ ಸಂಖ್ಯೆ 321ರ ಅನುಸಾರ, ಮುದ್ರಾಂಕ ಮತ್ತು ನೋಂದಣಿ ಮಹಾನಿರೀಕ್ಷಕರು ಹಾಗೂ ಅವರ ಅಧೀನ ಅಧಿಕಾರಿಗಳು ಡಿಮಾಂಡ್ ಡ್ರಾಫ್ಟ್ ಮತ್ತು ಪೇ ಆರ್ಡರ್ ಮೂಲಕ ಮುದ್ರಾಂಕ ಸುಂಕದ ಸಂಗ್ರಹಣೆಯನ್ನು ನಿಷೇಧಿಸುವ ಮೂಲಕ ಉತ್ತಮ ಆಡಳಿತಕ್ಕೆ ಉತ್ತೇಜನ ನೀಡಲು ಮತ್ತು ಆ ಮೂಲಕ ರಾಜಸ್ವ ಸೋರಿಕೆಯನ್ನು ತಡೆಯಲು ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚುವರಿ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕೃಷ್ಣ ಭೈರೇಗೌಡ**
ಕಂದಾಯ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

### ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ
### (1957ರ ಕರ್ನಾಟಕ ಅಧಿನಿಯಮ 34) ಉದ್ಧೃತ ಭಾಗ

**Xxx xxx xxx**

**10ಎ. ನಿರ್ದಿಷ್ಟ ಪ್ರಕರಣಗಳಲ್ಲಿ ಸ್ಟಾಂಪು ಸುಂಕವನ್ನು ನಗದಾಗಿ ಸಂದಾಯ ಮಾಡುವುದು.-** (1) 10ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಒಂದು ಲಿಖಿತದ ಮೇಲೆ ಸಂದಾಯ ಮಾಡತಕ್ಕ ಸ್ಟಾಂಪು ಸುಂಕವನ್ನು ಬ್ಯಾಂಕಿಂಗ್ ಖಜಾನೆಯಲ್ಲಿ ಅಥವಾ ಖಜಾನೆಯಲ್ಲಿ, ಈ ಸಂಬಂಧದಲ್ಲಿ ಅಧಿಸೂಚನೆ ಮೂಲಕ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು ಮೇಲುರುಜು ಮಾಡಿದ ಚಲನಿನ ಮೂಲಕ ನಗದಾಗಿ ಅಥವಾ ಯಾವುದೇ ಅನುಸೂಚಿತ ಬ್ಯಾಂಕಿನ ಹೆಸರಿನಲ್ಲಿ ಪಡೆಯಲಾದ ಡಿಮ್ಯಾಂಡ್‌ಡ್ರಾಫ್ಟ್ ಅಥವಾ ಪೇ ಆರ್ಡರ್ ಮೂಲಕ ಸಹ ಸಂದಾಯ ಮಾಡಬಹುದು. ಹಾಗೆ ಅಧಿಕೃತಗೊಳಿಸಲಾದ ಅಧಿಕಾರಿಯು, ಅಂಥ ಚಲನನ್ನು ಹಾಜರುಪಡಿಸಿದ ಮೇಲೆ ಮತ್ತು ಸುಂಕವನ್ನು ಸಂದಾಯ ಮಾಡಲಾಗಿದೆ ಎಂದು ಸೂಕ್ತ ಸತ್ಯಾಪನೆ ಮಾಡಿದ ತರುವಾಯ ಅಥವಾ ಸಂದರ್ಭಾನುಸಾರ ಡಿಮ್ಯಾಂಡ್ ಡ್ರಾಫ್ಟನ್ನು ಅಥವಾ ಪೇ ಆರ್ಡರನ್ನು ಸಲ್ಲಿಸಿದ ತರುವಾಯ ಲಿಖಿತದ ಮೇಲೆ ಹಿಂಬರಹದ ಮೂಲಕ ಹಾಗೆ ಸಂದಾಯ ಮಾಡಲಾದ ಸ್ಟಾಂಪು ಸುಂಕದ ಮೊಬಲಗನ್ನು ಗೊತ್ತುಪಡಿಸಬಹುದಾದ ಅಂಥ ರೀತಿಯಲ್ಲಿ ಪ್ರಮಾಣೀಕರಿಸತಕ್ಕದ್ದು.

**Xxx xxx xxx**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 300, 21ನೇ ಫೆಬ್ರವರಿ 2023

KARNATAKA LEGISLATIVE COUNCIL

ONE HUNDRED AND FIFTY SECOND SESSION

# THE KARNATAKA STAMP (AMENDMENT) BILL, 2024

**(LA Bill No. 21 of 2024)**

**(As passed by the Karnataka Legislative Assembly)**

A Bill further to amend the Karnataka Stamp Act, 1957.

Whereas it is expedient further to amend the Karnataka Stamp Act, 1957 (Karnataka Act 34 of 1957) for the purposes herein after appearing;

Be it enacted by the Karnataka State Legislature in the Seventy fifth yearof the Republic India as follows:-

**1. Short title and commencement.-** (1) This Act may be called the KarnatakaStamp (Amendment) Act, 2024.

(2) It shall come into force at once.

**2. Amendment of section 10A.-** In the Karnataka Stamp Act, 1957, (Karnataka Act 34 of 1957) in section 10A, in sub-section (1), the words "or by demand draft or by pay order drawn on a branch of any scheduled bank" and the words "or upon production of demand draft or pay order as the case may be" shall be omitted.

## STATEMENT OF OBJECTS AND REASONS

**(As appended to at the time of introduction)**

It is considered necessary further to amend the Karnataka Stamp Act, 1957 (Karnataka Act 34 of 1957) as per 2023-24 July Budget speech para number 321 to promote good governance by prohibiting the collection of Stamp duty through Demand Draft and Pay Order by the Inspector General of Stamps and Registration and their subordinate offices and thereby prevent leakages of revenue.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**KRISHNA BYREGOWDA**
Minister for Revenue

**K.R. MAHALAKSHMI**
Secretary
Karnataka Legislative Council

## ANNEXURE

## EXTRACT FROM THE KARNATAKA STAMP ACT, 1957
## (Karnataka Act 34 of 1957)

**XXX XXX XXX**

**10A. Payment of stamp duty by cash in certain cases.-** (1) Notwithstanding anything contained in section 10, the stamp duty payable on an instrument may also be paid in cash by challan in the Banking Treasury or Treasury, counter signed by an officer empowered by the State Government by notification in this behalf or by demand draft or by pay order drawn on a branch of any scheduled bank. The officer so empowered shall, on production of such challan and after due verification that the duty has been paid, or upon production of demand draft or pay order as the case may be, certify in such manner as may be prescribed by endorsement on the instrument, of the amount of the duty so paid.

**XXX XXX XXX**

Govt. Press, Vikasa Soudha, Bengaluru, 21st Feb, 2024, P7, W.D. , Copies 300